www.bwssb.karnataka.gov.in Telephone: 080-22945340

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

# BANGALORE WATER SUPPLY AND SEWERAGE BOARD

ಮುಖ್ಯ ಅಭಿಯಂತರರು(ವಿನ್ಯಾಸ ಮತ್ತು ಗುಣ ಆಶ್ವಾಸನೆ) ರವರ ಕಛೇರಿ

9 ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009

**ಸಂ: ಬೆಂ.ಜ.ಮಂ/ಮು.ಅ(ವಿ.ಗು.ಆ)/ಅ.ಮು.ಅ(ವಿ)/ತಾ.ಸ/ಸ.ಅ(ವಿ)/2225/2022-23 ದಿನಾಂಕ:13.03.2023**

---

## ಜ್ಞಾಪನಾ ಪತ್ರ-Issue Rates:

**ವಿಷಯ:** ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಏಕರೂಪ ಅನುಸೂಚಿ ದರಪಟ್ಟಿ: 2021-22 ಸಂಪುಟ-5ರಲ್ಲಿ M S ಪ್ಲೇಟ್‌ಗಳ ಹಾಗೂ M S ಕೊಳವೆಗಳ ದರಗಳ ಪರಿಷ್ಕರಣೆಯ ಕುರಿತು.

**ಉಲ್ಲೇಖ:** **1**. ಆ.ಸಂ: ಲೋ.ಇ-51 ಆರ್‌ಡಿಎಫ್ 2019.ಬೆಂಗಳೂರು ದಿ:25.03.2022.

**2**.ಸ.ಆ.ಸಂ.ನ.ಅ.ಇ 08/ಐಎನ್‌ಐ2021 (ಇ-ಕಛೇರಿ), ಬೆಂಗಳೂರು ದಿ:04.12.2021.

**3**.ಸಂ.ಬೆಂ.ಜ.ಮಂ/ಮು.ಅ(ವಿ)/ಅ.ಮು.ಅ(ವಿ)/ತಾ.ಸ(ವಿ)/2659/2021-22 ದಿ:25.03.2022

**4**.ಸಂ.ಬೆಂ.ಜ.ಮಂ/ಮು.ಅ(ವಿ)/ಅ.ಮು.ಅ(ವಿ)/ತಾ.ಸ(ವಿ)/04/2022-23 ದಿ:05.04.2022

**5**.ಸಂ: ಬೆಂ.ಜ.ಮಂ/ಮು.ಅ(ವಿ)/ಅ.ಮು.ಅ(ವಿ)/ತಾ.ಸ(ವಿ)/ಸ.ಅ(ವಿ)/419/2022-23 ದಿ:07.07.2022

**6**.ಸಂ. ಬೆಂಜಮಂ/ ಮುಅ(ವಿನ್ಯಾಸ&ಗುಆ)/ ಅ.ಮು.ಅ(ವಿನ್ಯಾಸ)/ ತಾ.ಸ(ವಿ&ಗುಆ)/ 1463/ 2022-23 ದಿ: 02.01.2023.

**7**.ಸಂ: ಬೆಂ.ಜ.ಮಂ/ಮು.ಅ(ವಿ.ಗು.ಆ)/ಅ.ಮು.ಅ(ವಿ)/ತಾ.ಸ/ಸ.ಅ(ವಿ)/1661/2022-23 ದಿನಾಂಕ:02.02.2023

**8**. No. EE/MI/Div/TA/V Valley/524A/2022-2023 Date: 02.03.2023.

**9**. ದಿನಾಂಕ: 13.03.2023 ರ ಏಕರೂಪ ದರಪಟ್ಟಿ ಸಂಪುಟ 5 ರ ಖಾಯಂ ಸಮಿತಿಯ ಸಭೆಯ ನಡಾವಳಿಗಳು

******

**ಪ್ರಸ್ತಾವನೆ:**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಸರ್ಕಾರದ ಆದೇಶದನ್ವಯ ಉಲ್ಲೇಖ (2) ರ ಆದೇಶದಂತೆ ರಚಿತವಾಗಿರುವ ಏಕರೂಪ ದರಪಟ್ಟಿ ತಯಾರಿಕೆ ಸಮಿತಿಯು ತಯಾರಿಸಿರುವ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಏಕರೂಪ ಅನುಸೂಚಿ ದರಪಟ್ಟಿ: 2021-22 ಸಂಪುಟ-5ನ್ನು ದಿನಾಂಕ: 25.03.2022 ರಿಂದ ಜಾರಿಗೆ ಬರುವಂತೆ ಉಲ್ಲೇಖ (3) ರ ಜ್ಞಾಪನಾ ಪತ್ರದಲ್ಲಿ ಅಳವಡಿಕೆಗೆ ಪ್ರಕಟಿಸಲಾಗಿದೆ.

ಉಲ್ಲೇಖ (1) ರ ಸರ್ಕಾರದ ಆದೇಶದನ್ವಯ ಮುಖ್ಯ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ, ಇವರು ಕೆ.ಯು.ಡಬ್ಲ್ಯು.ಎಸ್.ಎಸ್.ಬಿ, ಮತ್ತು ಆರ್.ಡಿ.ಡಬ್ಲ್ಯು&ಎಸ್.ಡಿ ಇಲಾಖೆಗಳೊಂದಿಗೆ ಸಮಾಲೋಚಿಸಿ ಎಲ್ಲಾ ರೀತಿಯ ಕೊಳವೆಗಳ (Pipes) ಬೆಲೆಗಳನ್ನು ಪ್ರತಿ ತ್ರೈಮಾಸಿಕ ಅವಧಿಗೆ ಅಥವಾ ಶೇ. 10% ಕ್ಕಿಂತ ದರ ವ್ಯತ್ಯಾಸವಾದಲ್ಲಿ ಪರಿಷ್ಕೃತ ದರಗಳನ್ನು ಪ್ರಕಟ ಮಾಡಬೇಕಾಗಿರುತ್ತದೆ.

ಈ ಸಂಬಂಧ 2022-23ನೇ ಆರ್ಥಿಕ ವರ್ಷದಲ್ಲಿ ಉಲ್ಲೇಖ (4), (5) ಹಾಗೂ (6) ರ ಜ್ಞಾಪನಾ ಪತ್ರಗಳ ಮೂಲಕ ಪರಿಷ್ಕೃತ ದರಗಳನ್ನು ರಾಜ್ಯ ವ್ಯಾಪ್ತಿ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳುವ ಎಲ್ಲಾ ಇಲಾಖೆಗಳಿಗೆ ಅನ್ವಯವಾಗುವಂತೆ ಜಾರಿಗೆ ತರಲಾಗಿರುತ್ತದೆ. ಸದರಿ ಜ್ಞಾಪನಾ ಪತ್ರಗಳಲ್ಲಿನ ಕೋಷ್ಟಕದಲ್ಲಿ ಸೂಚಿಸಿರುವ ನಿರ್ದಿಷ್ಟ ಕೊಳವೆ ಅಂಶಗಳ ಕೋಡ್‌ಗಳಿಗೆ ಅನ್ವಯವಾಗುವಂತೆ ದರಗಳನ್ನು ಶೇಕಡವಾರು ಹೆಚ್ಚಳದೊಂದಿಗೆ ಅಳವಡಿಸಿಕೊಳ್ಳುವುದಕ್ಕೆ ಆದೇಶಿಸಲಾಗಿರುತ್ತದೆ. ಕೊಳವೆಗಳ ದರಗಳನ್ನು ಶೇಕಡವಾರು ಹೆಚ್ಚುವರಿ ಮಾಡಿ ಪರಿಷ್ಕರಿಸಿರುವುದನ್ನು ಮುದ್ರಿತ ಏಕರೂಪ ಅನುಸೂಚಿ ದರಪಟ್ಟಿ: 2021-22 ಸಂಪುಟ-5 ರ ಕೊಳವೆ ಅಂಶಗಳ **finished rate ಗಳಿಗೆ ಅನ್ವಯಿಸುವಂತೆ ಪರಿಗಣಿಸಬೇಕಾಗುತ್ತದೆ.**

ಉಲ್ಲೇಖ(8) ರಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರು M S ಕೊಳವೆಗಳ ಪರಿಷ್ಕೃತ ದರಗಳನ್ನು ಪ್ರಕಟ ಮಾಡಲು ಪರಿಗಣಿಸಿರುವ M S ಪ್ಲೇಟ್‌ಗಳ ಪ್ರಸ್ತುತ ಮಾರುಕಟ್ಟೆ ಮೂಲ ದರಗಳಲ್ಲಿ ಶೇ.10% ಕ್ಕಿಂತ ದರ ವ್ಯತ್ಯಾಸವಾಗಿರುವುದು ಕಂಡುಬಂದಿದ್ದು, M S ಪ್ಲೇಟ್‌ಗಳ ಮೂಲ ದರಗಳನ್ನು ಪರಿಷ್ಕರಿಸಲು ಕೋರಿರುತ್ತಾರೆ.

ಈ ಸಂಬಂಧ ಉಲ್ಲೇಖ (7) ರ 2022-23ನೇ ಆರ್ಥಿಕ ವರ್ಷದ 4ನೇ ತ್ರೈಮಾಸಿಕ ಅವಧಿಗೆ ಪರಿಷ್ಕೃತ ದರಗಳನ್ನು ಪ್ರಕಟಮಾಡಿರುವ ಹಾಗೂ M S ಪ್ಲೇಟ್‌ಗಳ ಮೂಲ ಮಾರುಕಟ್ಟೆ ದರಗಳನ್ನು ವಿಮರ್ಶಿಸಲು ವಿವಿಧ ತಯಾರಕರು / ವಿತರಕರು / ಸರಬರಾಜುದಾರರಿಂದ Quotation ಗಳನ್ನು ಪಡೆದು ತುಲಾನಾತ್ಮಕ ಪಟ್ಟಿ ತಯಾರಿಸಿ ಉಲ್ಲೇಖ (2) ರ ಆದೇಶದನ್ವಯ ರಚಿತವಾಗಿರುವ ಮೂರು ಇಲಾಖೆಗಳ ಏಕರೂಪ ದರಪಟ್ಟಿ ತಯಾರಿಕೆ ಸಮಿತಿಯ ಸದಸ್ಯ ಇಲಾಖೆ/ಮಂಡಳಿಗಳನ್ನೊಳಗೊಂಡ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಏಕರೂಪ ದರಪಟ್ಟಿಯ ತಯಾರಿಕ ಖಾಯಂ ಸಮಿತಿಯು ದಿ:13.03.2022 ರಂದು ಸಭೆ ಸೇರಿ ಸಲ್ಲಿಕೆಯಾದ Quotation ಗಳು ಹಾಗೂ ಅವುಗಳ ತುಲಾನಾತ್ಮಕ ಪಟ್ಟಿಗಳನ್ನು ಪರಿಶೀಲಿಸಿ ಪರಿಷ್ಕೃತ ದರದ ಬಗ್ಗೆ ಆದೇಶ ಹೊರಡಿಸಲು ತೀರ್ಮಾನಿಸಿತು.

**ಆದೇಶ:**

ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಏಕ ರೂಪ ದರಪಟ್ಟಿಯ ತಯಾರಿಕ ಖಾಯಂ ಸಮಿತಿಯ ಸಭೆಯಲ್ಲಿ ಮೇಲಿನ ಅಂಶಗಳನ್ನು ಪರಿಶೀಲಿಸಿ, ಉಲ್ಲೇಖ-9 ರ ಸಭಾ ನಡವಳಿಗಳಲ್ಲಿನ ಸಮಿತಿಯ ತೀರ್ಮಾನದಂತೆ ಪ್ರಸ್ತುತ ಮಾರುಕಟ್ಟೆಯ M S ಪ್ಲೇಟ್‌ಗಳ ಮೂಲ ದರಗಳನ್ನು ಪರಿಗಣಿಸಿ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಏಕರೂಪ ದರಪಟ್ಟಿ: 2021-22 ರಲ್ಲಿನ M S ಕೊಳವೆ ಅಂಶಗಳ ದರಗಳನ್ನು ಕೋಷ್ಟಕದಲ್ಲಿ ಸೂಚಿಸಿರುವಂತೆ ಶೇಕಡವಾರು ವ್ಯತ್ಯಾಸದೊಂದಿಗೆ ಅಳವಡಿಸಿಕೊಳ್ಳುವುದು. ಈ ಪರಿಷ್ಕೃತ ದರಗಳನ್ನು ರಾಜ್ಯ ವ್ಯಾಪ್ತಿ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳುವ ಎಲ್ಲಾ ಇಲಾಖೆಗಳಿಗೆ ಅನ್ವಯವಾಗುವಂತೆ **ದಿನಾಂಕ: 02.03.2023 ರಿಂದ ಮುಂದಿನ ಆದೇಶದವರೆಗೆ ಜಾರಿಗೆ ತರಲಾಗಿದೆ** ಹಾಗೂ **ಉಳಿದಂತೆ ಸದರಿ ದರಪಟ್ಟಿ 2021-22 ಸಂಪುಟ – V ರಲ್ಲಿನ ಇತರೆ ಕೊಳವೆಗಳ ಅಂಶಗಳ ದರಗಳನ್ನು ದಿ:02.01.2023 ರಂದು ಹೊರಡಿಸಲಾದ ಉಲ್ಲೇಖ (6) ರ ಜ್ಞಾಪನಾ ಪತ್ರದ ಆದೇಶದಲ್ಲಿ ಸೂಚಿಸಿರುವಂತೆ ಶೇಕಡವಾರು ವ್ಯತ್ಯಾಸದೊಂದಿಗೆ ಅಳವಡಿಸಿಕೊಳ್ಳುವುದು.**

| Sl. No. | Items in CSR 2021-22 Volume-V | Corresponding SOR Code Nos. in CSR 2021-22 Volume-V | Percentage considered over existing **finished rates** of CSR 2021-22 Volume-V in the previous Memorandum issued vide ref(6) w.e.f. 02.01.2023 | Percentage to be considered over existing **finished rates** of CSR 2021-22 Volume-V **w.e.f. 02.03.2023** |
|---|---|---|---|---|
| 1 | MS Pipes | F010 to F280 | **-4%** | **+5%** |